ಈಗಿನ ಕಾಲದ ಹುಡುಗರಿಗೆ ಜವಾಬ್ದಾರಿಯ ಗುಣವಿಲ್ಲ ಎಂದು ನಾಯಕರಿಗೂ ಎಷ್ಟೋ ಸಲ ಅನ್ನಿಸಿತ್ತು. ಆದರೆ ಈ ಹುಡುಗರ ಚೈತನ್ಯ ನೋಡಿದರೆ ಯೌವನವೇ ಹಾಗಲ್ಲವೇ? ಈ ವಯಸ್ಸಿನಲ್ಲಿ ನೆಲ ಕಾಣೋದು ದೇಶ ಕಾಣೋದು ಅಂದರೆ ಒಂಥರಾ ಅಸಹಜ ಅಲ್ಲವೇ ಅನ್ನಿಸಿ ತಮ್ಮ ಹರೆಯದ ದಿನಗಳ ಹುಚ್ಚಾಟಗಳ ನೆನಪಾಗಿ ನಕ್ಕರು. ಹೊಸ ಪೀಳಿಗೆಯ ಬಗ್ಗೆ ಹಾಗೆಲ್ಲ ಆತಂಕ ಪಡುವಂತದ್ದೇನಿಲ್ಲ. ಹೊಸ ಕಾಲಮಾನ ಅವರ ಆದ್ಯತೆಗಳನ್ನು ಬದಲಾಯಿಸಿರಬಹುದು. ಆದರೆ ಕಾಲವೇ ಅವರಿಗೆ ವಿವೇಕಗಳನ್ನೂ ಕಲಿಸುತ್ತದೆ ಎಂದು ಯೋಚಿಸುತ್ತಿದ್ದ ನಾಯಕರಿಗೆ ಮೆರವಣಿಗೆಯ ಯಾರಾದರೂ ತಮ್ಮನ್ನು ಗುರುತಿಸಲಿ ಮಾತಾಡಲಿ ಎಂದು ಆಸೆಯಾಯಿತು. ಆದರೆ ನಾಯಕರನ್ನು ಯಾರಾದರೂ ಮಾತಾಡಿಸುವುದಿರಲಿ ಯಾರೂ ಅವರ ಗುರುತು ಕೂಡ ಹಿಡಿಯಲಿಲ್ಲ. ತಡೆಯಲಾಗದ ಸಂಕಟ ನಾಯಕರನ್ನು ಕವಿದುಕೊಂಡಿತು. ತಮ್ಮಿಂದ ದೂರವಾಗುತ್ತಿದ್ದ ಮೆರವಣಿಗೆಯನ್ನು ಮಂಕು ಬಡಿದವರಂತೆ ನೋಡುತ್ತ ಇದ್ದುಬಿಟ್ಟರು. ಆಗ ಇದ್ದಕ್ಕಿದ್ದಂತೆ ತನ್ನನ್ನು ಯಾರೋ ಎಳೆಯುತ್ತಿದ್ದಾರೆ ಎನ್ನಿಸಿತು ನಾಯಕರಿಗೆ. ಅದು ಯಾರು ಏನು ಎತ್ತ ಎಂದು ಅರ್ಥವಾಗುವಷ್ಟರಲ್ಲಿ ಅವರು ಅಲ್ಲಿನ ಬೇಕರಿಯೊಂದರಲ್ಲಿ ಇದ್ದರು. ಗಾಬರಿಯಿಂದ ಅವರ ಮೈ ನವಿರಾಗಿ ಕಂಪಿಸುತ್ತಿತ್ತು. ಮನಸ್ಸು ಸಹಜ ಸ್ಥಿತಿಗೆ ಬಂದ ನಂತರ ತಮ್ಮ ದಿನಸಿಯ ಚೀಲ, ಔಷಧಿ ಮತ್ತು ಮಾತ್ರೆಗಳ ಕವರು ಇವೆಲ್ಲ ಅವರಿಗೆ ನೆನಪಾದವು. ಅವು ಏನಾದವೆಂದು ತನ್ನಂತೆ ಬೇಕರಿಗೆ ತೂರಿಕೊಂಡಿದ್ದವರನ್ನು ಕೇಳಿದರು. ಆದರೆ ಅವರಿಗೂ ಅದರ ಬಗ್ಗೆ ಗೊತ್ತಿರಲಿಲ್ಲ.

ಅಷ್ಟರಲ್ಲಿ ಬೇಕರಿಯ ಹುಡುಗ ಚಡಪಡಿಸುತ್ತ ನಿಂತಿದ್ದ ನಾಯಕರನ್ನು ನೋಡಿ, 'ಸ್ವಾಮಿ, ನೀವಲ್ಲೇ ಇದ್ದಿದ್ರೆ ಪೊಲೀಸ್ರು ನಿಮ್ಮ ಬುರುಡೇಗೆ ನೀರು ಕಾಯಿಸಿರೋರು. ತಲೆ ಕೆಟ್ಟವರಂಗೆ ಅಲ್ಲೇ ನೋಡ್ತಾ ನಿಂತಿದ್ರಲ್ಲ ಯಾಕೆ? ಇದ್ಯಾವುದೋ ಬಡಪಾಯಿ ಅನ್ಯಾಯವಾಗಿ ಪೆಟ್ಟು ತಿಂತದೇಂತ ತಕ್ಷಣ ನಿಮ್ಮನ್ನ ಒಳಕ್ಕೆ ಎಳ್ಕೊಂಡೆ. ನಿಮ್ಮ ಬ್ಯಾಗು ಅಲ್ಲೇ ಎಲ್ಲೋ ಇರ್ತದೆ. ಗಲಾಟೆ ಎಲ್ಲಾ ತಣ್ಣಗಾಗಲಿ ಇರಿ. ನಿಮ್ಮ ಪ್ರಾಣಕ್ಕಿಂತ ಬ್ಯಾಗೇನು ಹೆಚ್ಚಲ್ವಲ್ಲ ಯಜಮಾನ್ರೆ?' ಎನ್ನುತ್ತ ಅರ್ಧ ತೆರೆದಿದ್ದ ಅಂಗಡಿಯ ಶಟರನ್ನು ಪೂರ್ತಿ ಕೆಳಗೆಳೆದ. ಕೆಳಗಿಳಿಯುತ್ತಿದ್ದ ಶಟರಿನ ಸಂದಿಯಿಂದ ಮುಚ್ಚುತ್ತಿರುವ ಅಂಗಡಿಗಳು, ಚೆಲ್ಲಾಪಿಲ್ಲಿಯಾದ ಮೆರವಣಿಗೆ, ದಿಕ್ಕಾಪಾಲಾಗಿ ಓಡುತ್ತಿರುವ ಜನ, ಲಾಠಿ ಹಾಗು ಬಂದೂಕು ಹಿಡಿದ ಪೊಲೀಸರು, ಕಾಲ್ತುಳಿತಕ್ಕೆ ಸಿಕ್ಕಿದ ಬಾವುಟಗಳು ಸಿನಿಮಾ ದೃಶ್ಯಗಳಂತೆ ನಾಯಕರ ಕಣ್ಣೆದುರು ಸರಿದುಹೋದವು. ಒಳಗೆ ಕತ್ತಲಾದ್ದರಿಂದ ಬೇಕರಿಯ ಹುಡುಗ ಲೈಟ್ ಹಾಕಿದ. ಆಗ ಅಲ್ಲಿದ್ದವರೆಲ್ಲ ನಾಯಕರಿಗೆ ಸ್ಪಷ್ಟವಾಗಿ ಕಾಣಿಸಿದರು. ಆಗ ನಾಯಕರಂತೆಯೇ ಅಲ್ಲಿ ತಲೆಮರೆಸಿಕೊಂಡಿದ್ದ ವ್ಯಕ್ತಿಯೊಬ್ಬ ನಾಯಕರನ್ನೇ ದಿಟ್ಟಿಸುತ್ತ, 'ನಿಮ್ಮನ್ನೆಲ್ಲೋ ನೋಡಿದ್ದೀನಿ. ಎಲ್ಲೀಂತ ಹೊಳೀತಾನೇ ಇಲ್ಲವಲ್ಲ ಎಲ್ಲಿರಬೋದು' ಎಂದು ತಲೆ ಕೆರೆದುಕೊಳ್ಳುತ್ತ ಪೇಚಾಡತೊಡಗಿದ. ಆತ ತುಂಬ ಹೊತ್ತು ಹಾಗೆ ಯೋಚಿಸುತ್ತಲೇ ಇದ್ದ. ಆತನಿಗೆ ನೆನಪಾಗಲಿ ಎಂದು ನಾಯಕರು ಹಾರೈಸತೊಡಗಿದರು. ಆದರೆ ನೆನಪಾಗಲಿಲ್ಲವೇನೋ ಆತ ಬೇಸರದಿಂದ ತುಟಿ ಕೊಂಕಿಸುತ್ತ ಸುಮ್ಮನಾದ. ನೆನಪಾಗದಿದ್ದರೆ ತಮ್ಮನ್ನೇ ಒಂದು ಮಾತು ಕೇಳಬಹುದಿತ್ತಲ್ಲ ಅನ್ನಿಸಿತು ನಾಯಕರಿಗೆ. ತಾವೇ ಹೇಳಲೆತ್ನಿಸಿದರು ಕೂಡ. ಆದರೆ ಸಂಕೋಚದಿಂದ ಮಾತೇ ಹುಟ್ಟಲಿಲ್ಲ. ತುಂಬ ಹೊತ್ತಿನವರೆಗೆ ನಾಯಕರು ತಮ್ಮ ಹಳೆಯ ದಿನಗಳನ್ನು ಮಗುಚುತ್ತ ಬೇಕರಿಯಲ್ಲಿ ನಿಂತಿದ್ದರು.

ಬೇಕರಿಯ ಹುಡುಗ ಶಟರನ್ನು ಮೇಲೆತ್ತಿ ಹೊರಗಿಣುಕಿ ನೋಡಿ, 'ಎಲ್ಲರೂ ಹೋಗಿ ಸ್ವಾಮಿ,